# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 390
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ ನಮೋಶಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಳೆದ ಒಂದು ವರ್ಷದಲ್ಲಿ ಬಿಎಂಟಿಸಿಯಲ್ಲಿ ಡಿಜಿಟಲ್ ಪೇಮೆಂಟ್ ಮೂಲಕ ಎಷ್ಟು ಮೊತ್ತದ ವಹಿವಾಟು ನಡೆದಿದೆ;(ತಿಂಗಳವಾರು ವಹಿವಾಟು ಮಾಹಿತಿಯನ್ನು ನೀಡುವುದು) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಡಿಜಿಟಲ್ ಪೇಮೆಂಟ್ ಮೂಲಕ 2023-24ನೇ ಸಾಲಿನಲ್ಲಿ ನಡೆಸಿದ ವಹಿವಾಟಿನ ಮಾಹೆವಾರು ಆದಾಯದ ವಿವರವು ಕೆಳಕಂಡಂತಿದೆ: (see table below) |
| ಆ. | ಪ್ರಸ್ತುತ ಬಿಎಂಟಿಸಿಯಲ್ಲಿ ಯುಪಿಐ ಡಿಜಿಟಲ್ ಪೇಮೆಂಟ್ (ಫೋನ್‌ಪೇ, ಗೂಗಲ್‌ಪೇ, ಪೇಟಿಎಂ) ಮೂಲಕ ಟಿಕೆಟ್‌ಖರೀದಿಸುವ ಸೇವೆಯು ಯಶಸ್ವಿಯಾಗಿದ್ದಲ್ಲಿ ರಾಜ್ಯದ ಇತರೆ ಸಾರಿಗೆ ನಿಗಮಗಳಿಗು ಈ ಸೇವೆಯನ್ನು ವಿಸ್ತರಿಸಬಹುದಲ್ಲವೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು; | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**<br>ನಿಗಮದಲ್ಲಿ ದಿನಾಂಕ:06.11.2024ರಿಂದ ಅನ್ವಯವಾಗುವಂತೆ ETMನಲ್ಲಿ ಯು.ಪಿ.ಐ. (UPI) ಡಿಜಿಟಲ್ ಪೇಮೆಂಟ್ ಮೂಲಕ ಟಿಕೆಟ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**<br>ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳ ಪೈಕಿ ಪ್ರಪ್ರಥಮವಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಯು.ಪಿ.ಐ. (UPI) ಡಿಜಿಟಲ್ ಪೇಮೆಂಟ್ ಮೂಲಕ ಟಿಕೇಟ್ ವಿತರಿಸುವ ವ್ಯವಸ್ಥೆಯನ್ನು ದಿನಾಂಕ:01.09.2023 ರಿಂದ ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. |

| ಮಾಹೆ | ಆದಾಯ (ಲಕ್ಷಗಳಲ್ಲಿ) |
|---|---|
| ಏಪ್ರಿಲ್-2023 | 347.14 |
| ಮೇ-2023 | 346.65 |
| ಜೂನ್-2023 | 344.40 |
| ಜುಲೈ-2023 | 380.26 |
| ಆಗಸ್ಟ್-2023 | 429.44 |
| ಸೆಪ್ಟೆಂಬರ್-2023 | 467.12 |
| ಅಕ್ಟೋಬರ್-2023 | 480.53 |
| ನವೆಂಬರ್-2023 | 556.83 |
| ಡಿಸೆಂಬರ್-2023 | 593.36 |
| ಜನವರಿ-2024 | 628.60 |
| ಫೆಬ್ರುವರಿ-2024 | 627.22 |
| ಮಾರ್ಚ್-2024 | 717.31 |
| **ಒಟ್ಟು** | **5918.85** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:**<br>ಪ್ರಸ್ತುತ ನಿಗಮದಲ್ಲಿ ನೂತನವಾಗಿ ಯುಪಿಐ ಡಿಜಿಟಲ್ ಪೇಮೆಂಟ್ (ಫೋನ್‌ಪೇ, ಗೂಗಲ್‌ಪೇ, ಪೇಟಿಎಂ) ವೈಶಿಷ್ಟ್ಯಗಳು ಇರುವಂತಹ Android based Smart Electronic Ticketing Machines (ETM)ಗಳ ಖರೀದಿ ಪ್ರಕ್ರಿಯೇ ಜಾರಿಯಲ್ಲಿರುತ್ತದೆ. ಸದರಿ ETM ಯಂತ್ರಗಳು ಬಂದ ನಂತರ ಕ.ಕ.ರ.ಸಾ. ನಿಗಮದಲ್ಲಿ ಡಿಜಿಟಲ್ ಪೇಮೆಂಟ್ ಮೂಲಕ ಟಿಕೆಟ್ ವಿತರಿಸುವ ಸೇವೆಯನ್ನು ಅನುಷ್ಠಾನಗೊಳಿಸಲಾಗುವುದು. |
| ಇ. | ಪ್ರಯಾಣಿಕರು ಟಿಕೆಟ್ ಖರೀದಿಸುವ ಸಂದರ್ಭದಲ್ಲಿ ಚಿಲ್ಲರೆ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಉದಾಹರಣೆ: ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣಿಸಲು 22/- ರೂ ಟಿಕೆಟ್‌ದರ ವಿದ್ದರೆ ಮೇಲಿನ 2/- ರೂಪಾಯಿಗಾಗಿ ಚಿಲ್ಲರೆ ಸಮಸ್ಯೆ ಎದುರಾಗುವುದಲ್ಲವೇ) ಬಂದಿದ್ದಲ್ಲಿ, ಟಿಕೆಟ್‌ದರದಲ್ಲಿ ಪೂರ್ಣ ಮೊತ್ತ ನಿಗದಿಪಡಿಸಲು ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು? | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:**<br>ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಟಿಡಿ 81 ಟಿಡಿಒ 2020 ದಿನಾಂಕ:29.07.2020ರನ್ವಯ ಹೊರಡಿಸಿರುವ ಸಾಮಾನ್ಯ ಸ್ಥಾಯಿ ಆದೇಶದಂತೆ ಪ್ರಯಾಣದರ ನಿಗದಿಪಡಿಸಲಾಗಿದೆ. ಪ್ರತಿಷ್ಠಿತ ಸಾರಿಗೆಗಳಲ್ಲಿ 10ರ ಗುಣಾಕಾರಕ್ಕೆ ರೌಂಡ್‌ಆಫ್ ಮಾಡಿ ಪ್ರಯಾಣದರ ನಿಗದಿ ಪಡಿಸಲಾಗಿದೆ.<br>ಸಾಮಾನ್ಯ ಹಾಗೂ ವೇಗದೂತ ಸಾರಿಗೆಗಳಲ್ಲಿ ಹೆಚ್ಚಿನ ನಿಲುಗಡೆಗಳಿರುವುದರಿಂದ ಪ್ರಯಾಣ ದರವನ್ನು ರೌಂಡ್‌ಆಫ್ ಮಾಡಿದಲ್ಲಿ ಕೆಲವು ಉಪಹಂತ/ ಹಂತಗಳಿಗೆ ಹೆಚ್ಚಿನ ಪ್ರಯಾಣದರ ವಿಧಿಸಬೇಕಾಗುತ್ತದೆ. ಇದರಿಂದ ಪ್ರಯಾಣಿಕರಿಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುತ್ತದೆ.<br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**<br>ನಿಗಮದ ಸಾರಿಗೆಗಳಲ್ಲಿ ಡಿಜಿಟಲ್ ಪೇಮೆಂಟ್ ವ್ಯವಸ್ಥೆಯನ್ನು ಹಾಲಿ ಜಾರಿಗೊಳಿಸಿದ್ದು, ಚಿಲ್ಲರೆ ಸಮಸ್ಯೆ ನಿವಾರಣೆಗೆ ಸದರಿ ವ್ಯವಸ್ಥೆಯು ಉಪಯುಕ್ತವಾಗಿದೆ.<br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**<br>ಪ್ರಸ್ತುತ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಪ್ರಯಾಣಿಕರ ಪ್ರಯಾಣ ದರಗಳನ್ನು ರೂ.5.00ರ ಗುಣಕದಲ್ಲಿ ನಿಗದಿಪಡಿಸಲಾಗಿದೆ. |

ಸಂಖ್ಯೆ: ಟಿಡಿ 209 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು